SRI K. PRABHAKAR (Minister for Rural Development and Panchayathi Raj):—

(*a*) Yes.

(*b*) During the year 1973-74.

		Rs. P.
(*c*) 1973-74	...	11,181-00
1974-75	...	6,629-23
1975-76	...	4,822-50
1976-77	...	3,297-40

(*d*) Yes.

(*e*) No.

(*f*) Since May 1976. Due to two Dips on the road were under construction and there was no possibility of providing diversion road as there is sugarcane crop on both sides of the road.

ಶ್ರೀ ಜೆ. ಎಸ್. ಆಮಂಣ್ಣನವರ್.—ಸ್ವಾಮಿ ಚಿಕ್ಕೋಡಿ ತಾಲ್ಲೂಕು ದೀಪಮಾಲ್ ಮಾನಕಪುರ್ ರಸ್ತೆಕಾಮಗಾರಿಗಾಗಿ ೧೯೭೩-೭೪, ರಲ್ಲಿ ೧೧,೧೮೧ ೦೦ ರೂಪಾಯಿಗಳನ್ನೂ, ೧೯೭೪-೭೫ ರಲ್ಲಿ ೬,೬೨೯; ೨೩ ರೂಪಾಯಿಗಳನ್ನೂ ೭೫-೭೬ ರಲ್ಲಿ ೪,೮೨೨.೫೫ ರೂಪಾಯಿಗಳನ್ನೂ, ೧೯೭೬-೭೭ನೇ ಸಾಲಿನಲ್ಲಿ ೩,೨೯೭.೪೦ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂದು ನನ್ನ ಪ್ರಶ್ನೆಗೆ ಉತ್ತರವಾಗಿ ಕೊಟ್ಟಿದ್ದೀರಿ ಆ ರಸ್ತೆ ಕೆಲಸವನ್ನು ಮಾಡಿಸಿದ್ದರೆ ಅಲ್ಲಿ ಬಸ್ಸುಗಳು ಓಡಾಡುತ್ತಿದ್ದುವು. ಅಲ್ಲಿ ಬಸ್ಸುಗಳು ಓಡುವುದು ನಿಲ್ಲುತ್ತಲೆ ಇರಲಿಲ್ಲ. ಆದ್ದರಿಂದ ನನಗೆ ಗೊತ್ತಿರುವ ಹಾಗೆ ಅಲ್ಲಿ ಹಣವನ್ನು ಖರ್ಚುಮಾಡಿಲ್ಲ. ಅಲ್ಲಿ ಹಣವನ್ನು ಖರ್ಚು ಮಾಡಿದ್ದೇವೆ ಎಂದು ಲೆಕ್ಕವನ್ನು ತೋರಿಸಿರುವುದು ಬರೀ ಭೋಗಸ್. ಆದಕಾರಣ ಇದನ್ನು ತನಿಖೆ ಮಾಡಲು ಒಂದು ಸಮಿತಿಯನ್ನು ನೇಮಕ ಮಾಡುತ್ತೀರಾ ? ಮತ್ತು ಆ ರಸ್ತೆಯಲ್ಲಿ ಅನಾಹುತಗಳು ಆಗುವುದನ್ನು ತಪ್ಪಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ? ಹಾಗಾದರೆ ಯಾವಾಗ ಈ ಸಮಿತಿಯನ್ನು ನೇಮಕ ಮಾಡುತ್ತೀರಾ ಎಂಬುದನ್ನು ಹೇಳುತ್ತೀರಾ ?

† ಶ್ರೀ ಕೆ. ಪ್ರಭಾಕರ್.—ಈ ಬಗ್ಗೆ ಈಗಾಗಲೇ ನಾನು ಸಾಕಷ್ಟು ಉತ್ತರವನ್ನು ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲೇ ಕೊಟ್ಟಿದ್ದೇನೆ. ಇದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡುವ ಅವಶ್ಯಕತೆ ಇಲ್ಲ. ಈ ಬಗ್ಗೆ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಮಾಡುವುದಕ್ಕೆ ಅವಕಾಶ ಇದೆ ಇದರಲ್ಲಿ ನ್ಯೂನತೆಗಳು ಇವೆಯೆಂದು ಈ ಪ್ರಶ್ನೆಯಲ್ಲಿಯೇ ಗೊತ್ತಾಗುತ್ತದೆ ಆದ್ದರಿಂದ ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಸರ್ಕಾರದವರು ಆದಷ್ಟು ಜಾಗ್ರತೆ ನ್ಯಾಯವನ್ನು ದೊರಕಿಸುತ್ತಾರೆ.

ಶ್ರೀ ಜೆ.ಎಸ್. ಆಮ್ಮಣ್ಣನವರ್.—ಯಾವಾಗ ಮಾಡುತ್ತೀರಾ, ಏತಕ್ಕೆಂದರೆ ನಿಧಾನ ಮಾಡುವುದಾದರೆ ಅಲ್ಲಿ ಮ್ಯಾನುಪಿಲೇಟ್ ಮಾಡುವುದಕ್ಕೆ ಅವಕಾಶವಾಗುತ್ತದೆ. ಅಲ್ಲಿ ರೋಡು ಆಗಿದೆಯೇ ದುಡ್ಡು ಖರ್ಚಾಗಿದೆಯೇ ಎಂಬುದನ್ನು ನೋಡಬೇಕು. ಈ ವಿಷಯದಲ್ಲಿ ನಾನು ಯಾರ ಮೇಲೂ ಅಪಾದನೆ ಮಾಡುವುದಿಲ್ಲ. ಇದನ್ನು ಮಾನ್ಯ ಮಂತ್ರಿಗಳು ಸ್ವಲ್ಪ ಪರಿಶೀಲನೆ ಮಾಡುತ್ತೀರಾ ?

ಶ್ರೀ ಕೆ ಪ್ರಭಾಕರ್.—ಇದನ್ನು ಆದಷ್ಟು ಬೇಗ ಪರಿಶೀಲನೆ ಮಾಡುತ್ತೇವೆ. ಆದರೆ ಇಷ್ಟೇ ಕಾಲಕ್ಕೆ ಮಾಡುತ್ತೇವೆಂದು ಹೇಳುವುದು ಕಷ್ಟವಾಗುತ್ತದೆ.

Recruitment in Department of Fisheries and Horticulture

190 SRI K.R. SRINIVASULU NAYUDU (Shanthinagar)—

Will the Minister of State for Fisheries and Horticulture be pleased to state:—

(*a*) the percentage of direct recruitment to the posts of Class II in the Department of Fisheries and Horticulture ;

(*b*) the steps taken to bring the percentage of direct recruitment to the Class II posts in the Department of Fisheries on par with allied departments like Horticulture to have uniformity in these departments ?

SRI K.T. RATHOD (Minister of State for Fisheries and Horticulture.—

(*a*) Department of Fisheries.—66⅔% by direct recruitment and 33⅓% by promotion.

(*b*) This question will be examined.

ಶ್ರೀ ಕೆ. ಆರ್. ಶ್ರೀನಿವಾಸಲುನಾಯಂಡ್ಲು.—ಸ್ವಾಮಿ ನಾನು ಕೇಳಿರುವ ಎರೆಡು ಪ್ರಶ್ನೆಗಳನ್ನೂ ತಾವು ಒಪ್ಪಿಕೊಂಡಿದ್ದೀರಿ ಆದರೆ ಮಾನುಗಾರಿಕೆ ಇಲಾಖೆಯಲ್ಲಿನ ನೇಮಕಾತಿಗಳಲ್ಲಿ ರೇಷಿಯೋ ಪ್ರಕಾರ ಕೊಟ್ಟಿದ್ದೀರಿ, ಆದರೆ ತೋಟಗಾರಿಕೆ ಇಲಾಖೆಯಲ್ಲಿ ರೇಷಿಯೋ ಕೊಟ್ಟಿಲ್ಲ. ಇದರಲ್ಲಿ ತಾರತಮ್ಯ ಇದೆಯೆಂದು ಕಾಣುತ್ತದೆ. ಇದರಿಂದ ಅನೇಕ ಅಧಿಕಾರಿಗಳಿಗೆ ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಇದನ್ನು ಎಷ್ಟು ದಿವಸಗಳಲ್ಲಿ ಬಗೆಹರಿಸುತ್ತೀರಾ ?

† ಶ್ರೀ ಕೆ.ಟಿ. ರಾಥೋಡ್.—ಈಗ ಮಾನ್ಯ ಸದಸ್ಯರ ಅಪೇಕ್ಷೆ ಮಾನುಗಾರಿಕೆಯ ಇಲಾಖೆಯಲ್ಲಿ ಕ್ಲಾಸ್ II ನೌಕರರಿಗೆ ಹೆಚ್ಚು ಪ್ರಮೋಷನ್ನಿನ ಅನುಕೂಲತೆಯನ್ನು ಮಾಡಿಕೊಟ್ಟಿಲ್ಲ ಎಂದು ಇದೆ. ಈಗ ಅವರಿಗೆ ಸ್ವಲ್ಪ ವಿವರಗಳನ್ನು ಕೊಟ್ಟರೆ ಅವರಿಗೆ ಸಮಾಧಾನವಾಗುತ್ತದೆ. ಅದು ಈ ರೀತಿ ಇದೆ. ಈ ಇಲಾಖೆಯಲ್ಲಿ ಕ್ಲಾಸ್ (೧೧) ೩೦ ಅಸಿಸ್ಟೆಂಟ್ ಡೈರೆಕ್ಟರ್ ಆಫ್, ಫಿಷರೀಸ್ ಇದ್ದಾರೆ. ಇದರಲ್ಲಿ ೧೪ ಸೀನಿಯರ್ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಫಿಷರೀಸ್ ಇದ್ದಾರೆ. ಇದರಲ್ಲಿ ಈಗಾಗಲೇ ೧೪ ಜನ ಸೀನಿಯರ್ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಫಿಷರೀಸ್‌ಗೆ ಪ್ರಮೋಷನ್ ಕೊಟ್ಟಿದ್ದೇವೆ ಕಳೆದ ಒಂದು ವರ್ಷದಲ್ಲಿ ಈ ಇಲಾಖೆಯಲ್ಲಿ ಸುಮಾರು ೩೨ ಜನಗಳಿಗೆ ಪ್ರಮೋಷನ್ ಕೊಟ್ಟಿದ್ದೇವೆ. ಈ ಇಲಾಖೆಯಲ್ಲಿ ಪ್ರಮೋಷನಲ್ ಆಪರ್ಚ್ಯುನಿಟಿ ಇಲ್ಲ ಎಂದಲ್ಲ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ೬೬ ೨/೩ ಸೇಕಡಾವಾರು ಪ್ರಮಾಣವನ್ನು ಡೈರೆಕ್ಟ್ ರೆಕ್ರೂಟ್‌ಮೆಂಟಿನಲ್ಲಿ ತೆಗೆದುಕೊಳ್ಳುತ್ತೇವೆ. ಹಾರ್ಟಿಕಲ್‌ಚರಲ್ ಡಿಪಾರ್ಟ್‌ಮೆಂಟಿನಲ್ಲಿ ೫೦ ಪರ್ಸೆಂಟ್ ಡೈರೆಕ್ಟ್ ರೆಕ್ರೂಟ್‌ಮೆಂಟ್ ೫೦ ಪರ್ಸೆಂಟ್ ಪ್ರಮೋಷನ್ ಇದೆ. ಅಲ್ಲಿ ಆ ತರಹ ಅವಕಾಶ ಮಾಡಿಕೊಟ್ಟಿದ್ದೇವೆ. ಈಗಾಗಲೇ ಆದಷ್ಟು ಬೇಗ ಈಗ ಇರತಕ್ಕ ತಾರತಮ್ಯವನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಆರ್. ಶ್ರೀನಿವಾಸಲುನಾಯಂಡ್ಲು.—ತಾರತಮ್ಯವನ್ನು ಸರಿಪಡಿಸುತ್ತೇವೆಂದು ತಾವು ನಮಗೆ ಆಶ್ವಾಸನೆಯನ್ನು ಕೊಟ್ಟು ಎರಡು ವರ್ಷವಾಯಿತು. ಇನ್ನೂ ಅದು ಕಾರ್ಯಗತವಾಗಿಲ್ಲ. ಆದ್ದರಿಂದ ಈಗಲಾದರೂ ಆದಷ್ಟು ಬೇಗ ಈ ಇಲಾಖೆಯ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ಜಾಗ್ರತೆಯಾಗಿ ಫೈನಲೈಜ್ ಮಾಡಿ ಅದನ್ನು ಕಾರ್ಯಗತ ಮಾಡುತ್ತೇವೆ ಎಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಕೆ ಟಿ. ರಾಥೋಡ್.—ಅದು ಈಗಾಗಲೇ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಅದನ್ನು ಒಂದು ತಿಂಗಳೊಳಗೇ ಮಾಡೋಣ.

Educational Opportunities to Students of Certified Schools and Remand Homes

191 SRI PRABHAKAR TELKAR (Kalagi)—

Will the Minister of State for Women and Children's Welfare be pleased to state.—

(*a*) the number of Remand Homes in the State (its location and the number of Boys and Girls as on 31st July 1976 in each such Home may be furnished) ;